ಸತ್ತಿ

ಸಾಮ್ರಾಜ್ಯ ಚಿಹ್ನೆಗಳ ಸೀಗುರಿಯು ಬೆಳ್ಗೊಡೆಯು
ಬೀಳ್ಕೊಂಡು ಏಕಾಂತದೊಳಗೆ
ಪಾಂಡು ಮಾದ್ರಿಯರ ದಾಂಪತ್ಯ ವಿರಹಕೆ ಸಂದು
ಕೊಂದು ಕೂಗಿತು ಕಾಡನಡುವೆ.

ತಮ್ಮ ಹೆಸರಿಗೆ ಹೇಸಿ ಒಡೆತನಕೆ ಕೊಕ್ಕರಿಸಿ
ತಮ್ಮಾತ್ಮವೇ ಶತ್ರುವೆನಲು
ಮುಡಿಪುಗಟ್ಟಿದರು ಮುನಿ ಶಾಪಕ್ಕೆ ತಮ್ಮನುವ;
ಸವೆದಿರ್ದರಲ್ಲಿ ಕಾಡಿನೊಳು.

ಅನುಭವವು ಸವಿಯಲ್ಲ—ಅದರ ನೆನಪೇ ಸವಿಯು,
ಅದ ಕದ್ದು ಮೇಯದೇ ಮನವು?
ಆಗ ಮೂಸೆಯ ಚಿನ್ನದಂತೆ ನೀರಪ್ಪುದೆದೆ
ಕರಗುತಲ್ಲಲ್ಲಿ ಚೆಲ್ಲುವುದು.

ಕತ್ತಲೆಯ ಆಳದಲಿ ಗುಯ್ಯೆಂಬ ಗುಳುಗುಳಿಪ
ಜಂಜಡಲಿ ಪಾಂಡುನೃಪನೊಮ್ಮೆ
ಹಲುಬಿದಾ ನುಡಿಯುದನು ಕೇಳಿ ಕೊಟ್ಟಿತು ಭಾಷೆ
ಕನ್ನಡಕೆ ವಿಲಾಸಲೆಂದೆನಿಸಿ.

೨

ಮುನಿಸು ಹೊಗೆ ಸೂಸುವುದೆ ಕಾನನದ ಮೌನದಲಿ?
ಮನವ ದಹಿಸುವ ಮೋಡಿ ದಳ್ಳುರಿವುದೇ?
ಹುಸಿ ಬೆಸುಗೆಯಿಕ್ಕಿಹುದೆ ಎಳಲತೆಯು ಹಾಸದಲಿ?
ಕಟ್ಟು ಬಣ್ಣದ ಬೆಡಗು ಮಿರುಗುತಿಹುದೆ?
ಜೀವನವನುಕ್ಕಿಸುವ ಕೀರ್ತಿ ಮದಿರಾನಂದ
ಕೋಗಿಲೆಯು ಕಲರವದಿ ಹೊಮ್ಮುತಿಹುದೆ?
ಸೃಷ್ಟಿಯಾ ಸೋಗಿಲಿದು; ಶಾಂತಿಯಾ ಬಾಗಿಲಿದು;
ಕವಡಿರದ ಬಾಳುವೆಯು ಹಂದರಿದುವೆ.

ಬರುವ ಸೊಗಗಳ ಬರವ ತರುವ ಸುಗ್ಗಿಯ ಬರವ
ಬರಿದೆ ಹಾರೈಸುವರೆ ವಿರಹಿಜನರು ?
ಎಂದೆಂದೊ ಕೂಡಿ ಅಗಲಿದ ನೆನಹು ಅಕ್ಕರೆದೆಯ
ತಂದು ಕೂಡಿಪುದು ರಸಕೇಲಿಗಳೊಳು.
ಅವರ ಬೇಟೆಗೆ ಬಂದು ಕೊಂದು ಕೊಲೆಪಾಳ್ವವಗೆ
ಮುನಿಯದೇ ಧರೆಯ ಸೌಭಾಗ್ಯವೆಲ್ಲ?
ಹಿಮದ ರಾಶಿಯ ವಿಭವ—ನಿನ್ನ ರಾಜ್ಯದ ವಿಭವ
ಕರಗದೇ ಅಳಲ ಬೆಂಕಿಯ ಸನಿಹದೆ?

ಸುಗ್ಗಿ ಮೊರೆಮೊರೆವಂದು ತುಂಬಿ ಜೇಂಕರಿಪಂದು
ಮೊಗ್ಗೆಯುದು ಬಿರಿದೆದೆಯ ಪಚ್ಚವಂದು.
ಹಿಗ್ಗಿ ಕೋಗಿಲೆ ಹಾಡಿ ಕಾದಲರ ಕರೆವಂದು
ಬುಗ್ಗೆ ಬುಗ್ಗೆಯಲಿ ರಸವೊಸರುವಂದು.
ನಲ್ಲೆಯರ ತೋಳ್ಗಳೇ ಶರಣೆಂದು ಜನರೆಲ್ಲ
ಅಲ್ಲಲ್ಲಿ ಹಂಬಲಿಸಿ ಸಂಭ್ರಮಿಸಲು
ಎಲ್ಲಾದರೂ ನಲ್ಲೆ ಸವಿದುಟಿಯ ಹೀರಿದರೆ
ಕಲ್ಲಾಗಿ ಬೀಳ್ವೆ ಮೃತ್ಯುವ ಪಡದೊಳು.

ಆದರೇನರಸೊಂದು ಕಾಡ ಗವಿಯಲಿ ಮನೆಯ
ಎಂತಾದರೂ ಪೊರೆಯೊ ನಿನ್ನ ಬಾಳ.
ವಿಧಿ ಕೊಟ್ಟ ಹರೆಯಕ್ಕೆ ಅಡ್ಡಬಂತೆನ್ನ ವಿಧಿ
ಮುನಿಯ ಶಾಪದಿ ಕಂಡರುಂಟೆ ತೊದಲ?
ಪುಣ್ಯಜೀವಿಗಳ ಹೊರೆಯುವ ಕೆಲಸ ದೇವರಿಗೆ
ಪಾಪಿ ಜೀವನ ಜವಸಕಾಲ ಮೆಟ್ಟು.
ಅಯ್ಯಯ್ಯೊ! ಅವನ ತುಳಿತಕೆ ಕೊರಲನೊಪ್ಪಿಸುತ
ಸಾಯುದಂದದಿ ಬನದಿ ತಲೆಯ ಮರಸು.

*   *   *   *

